F.No.23-513/08 (WRO)

# THE ROLE OF VEERASHAIVAS IN THE SOCIAL DEVELOPMENT OF SOLAPUR

(ಸೋಲ್ಲಾಪುರದ ಸಾಮಾಜಿಕ ಪ್ರಗತಿಯಲ್ಲಿ ವೀರಶೈವರ ಪಾತ್ರ)

A

Minor Research Project

Submitted to

University Grants Commission

Western Zone PUNE

By

**Dr. B.B. PUJARI**
M.A., M.A.Ph.D.
Associate Professor & Head Dept. Of Kannada
Sangmeshwar College Solapur -1

2010

SOLAPUR UNIVERSITY, SOLAPUR

## :: ಎರಡು ಮಾತು ::

ಸೊಲ್ಲಾಪುರ ಒಂದು ಐತಿಹಾಸಿಕ ನಗರ. ಇದಕ್ಕೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕವಾದ ಭವ್ಯ ಪರಂಪರೆ ಇದೆ. ನಾನು ಈ ಊರಿಗೆ ಬಂದಾಗಿನಿಂದ ಈ ಊರ ಬಗ್ಗೆ ಬರೆಯಬೇಕೆಂದು ಬಹಳ ಯೋಚಿಸಿದ್ದೆ. ಆ ಯೋಜನೆಯನ್ನು ಯು.ಜಿ.ಸಿ. ಪುಣೆ ವಿಭಾಗಕ್ಕೆ ಕಳಿಸಿದೆ. ಅದು ಸ್ವೀಕೃತವಾಯಿತು. ಧನಸಹಾಯವೂ ದೊರೆಯಿತು. (ಪತ್ರ ಸಂಖ್ಯೆ: F.No. 23-513/08 WRO 17.10.2008 ) ಒಂದು ವರ್ಷದ ತಿರುಗಾಟ, ನೂರೆಂಟು ನಮೂನೆಯ ಅನುಭವಗಳು. ಆರು ತಿಂಗಳ ಬರಹದಲ್ಲಿ ಈ ಪ್ರಕಲ್ಪ ಹೀಗೆ ಮೂಡಿಬಂದಿದೆ. ಇದು ಯಾರು ಮಾಡಿಲ್ಲದ ಕೆಲಸ, ನಾನೇ ಮಾಡಿದ್ದು ಎಂಬ ಹುಂಬತನ ನನಗಿಲ್ಲ. ಈ ಕೆಲಸವನ್ನು ಇನ್ನೂ ಚೆನ್ನಾಗಿ ಮಾಡಲು ಸಾಧ್ಯ. ಅದು ಪ್ರಕಟಿಸುವಾಗ ಖಂಡಿತ ವಿಚಾರ ಮಾಡುತ್ತೇನೆ.

ಯು.ಜಿ.ಸಿ. ಧನ ಸಹಾಯ ಇಲ್ಲದಿದ್ದರೆ ಬಹುಶಃ ಈ ಪ್ರಕಲ್ಪ ಹೊರಬರುತ್ತಿರಲಿಲ್ಲ. ಆದ್ದರಿಂದ ಯು.ಜಿ.ಸಿ. ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಋಣಿಯಾಗಿದ್ದೇನೆ. ಸಣ್ಣ ಸಂಶೋಧನ ಪ್ರಕಲ್ಪದ ವಿಷಯವನ್ನು ಚರ್ಚಿಸಿ ಅದನ್ನು ಪಡೆಯುವಂತೆ ಸೂಚಿಸಿದವರು ಡಾ॥ ಜಗನ್ನಾಥ ಹೆಬ್ಬಾಳೆ ಅವರು, ಸೊಲ್ಲಾಪುರದ ಇತಿಹಾಸದ ಬಗ್ಗೆ ಚರ್ಚಿಸಿ ಸೂಚನೆ ನೀಡಿದವರು ಪ್ರೊ. ಆರ್. ಎಂ. ಸಂಗಸೆಟ್ಟಿ ಅವರು, ಪ್ರೊಜೆಕ್ಟ ಎಲ್ಲಿಗೆ ಬಂತು ಎಂದು ಕೇಳಿ ಎಚ್ಚರಿಸಿದವರು ಡಾ. ಗುರುಲಿಂಗಪ್ಪ ಧಬಾಲೆ ಅವರು ಇವರಿಗೆಲ್ಲ ನಾನು ಸದಾ ನೆನೆಯುತ್ತೇನೆ.

ಯು.ಜಿ.ಸಿ. ಯಿಂದ ಪತ್ರ ಬಂದಾಗ ಮೊದಲು ಸಂತೋಷ ಪಟ್ಟವರು ವಿದ್ಯಾರ್ಥಿಗಳ ನೆಚ್ಚಿನ ಪ್ರಾಚಾರ್ಯ ಡಾ. ಜಿ.ಎನ್. ಚಿಟ್ಟಿ ಅವರು. ಅವರೂ ಒಂದು ಇತಿಹಾಸ ನಿರ್ಮಿಸಿದರು!

ಉಳಿದ ಪ್ರಾಧ್ಯಾಪಕರಿಗೂ ಯು.ಜಿ.ಸಿ. ಪ್ರೋಜೆಕ್ಟ್ ಏಕೆ ಸಿಗಬಾರದು? ನೀವೇ ಅವರಿಗೆಲ್ಲ ಯಾಕೆ ಓರಿಯಂಟೇಶನ್ ಮಾಡಬಾರದು ? ಎಂದು ಚರ್ಚಿಸಿ, ಇಪ್ಪತ್ತೈದು ಪ್ರಾಧ್ಯಾಪಕರಿಗೆ ನನ್ನ ಕಡೆ ಬೆರಳು ಮಾಡಿ ತೋರಿಸಿದರು. ನನ್ನಿಂದಾದ ಮಾರ್ಗದರ್ಶನ ಮಾಡಿದೆ. ಅವರಲ್ಲಿ ಇಪ್ಪತ್ತು ಜನರಿಗೆ ಯು.ಜಿ.ಸಿ. ಪ್ರೊಜೆಕ್ಟ್ ಸಿಕ್ಕವು. ಈಗ ಅವರೆಲ್ಲ ಸಂಶೋಧನೆಯಲ್ಲಿ ಬಿಜಿ! ಇದಕ್ಕಿಂತ ಸಂತೋಷ ಇನ್ನೇನಿದೆ?

ನಮ್ಮ ಸಂಸ್ಥೆಗೆ ಭವ್ಯವಾದ ಪರಂಪರೆ ಇದೆ. ಶ್ರೀ ಮೇಘರಾಜ ಕಾಡಾದಿ, ಶ್ರೀ ಧರ್ಮರಾಜ ಕಾಡಾದಿ ಇವರು ಸಂಸ್ಥೆಯ ಆಧಾರ ಸ್ಥಂಭವಾಗಿದ್ದಾರೆ. ಯು.ಜಿ.ಸಿ. ಯ ಇಷ್ಟೊಂದು ಲಘು ಸಂಶೋಧನ ಪ್ರಕಲ್ಪಗಳನ್ನು ಪಡೆದು ತಮ್ಮ ಸಂಸ್ಥೆಯ ಇಷ್ಟೊಂದು ಪ್ರಾಧ್ಯಾಪಕರು ಸಂಶೋಧನೆಯಲ್ಲಿ ತೊಡಗಿರುವದನ್ನು ಕಂಡು ಹೆಮ್ಮೆ ಪಡುತ್ತಾರೆ.

ಹೀಗೆ ಈ ಪ್ರಕಲ್ಪ ನನ್ನೊಬ್ಬನಿಂದ ಆದದ್ದಲ್ಲ ನೂರಾರು ನಾಗರಿಕರ, ವಿಚಾರವಂತರ ಬೆಂಬಲದಿಂದ ಆದ ಕೆಲಸ. ಇಂಥ ಕೆಲಸಗಳಿಗೆ ಮುಂದೆಯೂ ಅವರ ಸಹಕಾರವನ್ನು ಅಪೇಕ್ಷಿಸುತ್ತ, ಎಲ್ಲರಿಗೂ ನಮನ ಹೇಳುತ್ತ ನನ್ನ ಮಾತು ಮುಗಿಸುತ್ತೇನೆ.

– ಡಾ. ಬಿ.ಬಿ. ಪೂಜಾರಿ.

# 7. ನಿರೀಕ್ಷಣೆ

ಸಧ್ಯ ವೀರಶೈವರ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚಾಗಿದ್ದು ನಂತರದ ಸ್ಥಾನ ಮಹಾರಾಷ್ಟ್ರ ಹಾಗೂ ಆಂದ್ರ ಪ್ರದೇಶ, ಕೇರಳಗಳಲ್ಲಿ ಕಂಡುಬರುತ್ತದೆ. ಉಳಿದಂತೆ ವ್ಯಾಪಾರ, ಉದ್ಯೋಗ, ನೌಕರಿ ಕಾರಣದಿಂದ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಹಂಚಿ ಹೋಗಿದ್ದಾರೆ.

ಜ್ಞಾನ–ತಂತ್ರಜ್ಞಾನದಲ್ಲಿ ಆದ ಬದಲಾವಣೆಗಳಿಂದಾಗಿ, ದೇಶ ವಿದೇಶಗಳ ಸಂಸ್ಕೃತಿಯ ಕೊಡಕೊಳ್ಳುವಿಕೆಯಿಂದಾಗಿ, ದೂರದರ್ಶನಗಳಿಂದಾಗಿ, ವೇಗದ ಸಾಧನ ಸಾಮಗ್ರಿಗಳಿಂದಾಗಿ ಧರ್ಮ ತತ್ವಜ್ಞಾನ ಅಧ್ಯಾತ್ಮ ವಿಕಾಸದಲ್ಲಿ ಗಣನೀಯ ಇಳಿಮುಖ ಕಂಡುಬರುತ್ತಿದೆ. ಹಣಬಲ, ಜನಬಲ, ವಿಲಾಸ ಜೀವನದತ್ತ ಐಹಿಕ ಜೀವನದತ್ತ ಜನತೆ ವಾಲುತ್ತಿದೆ. ಇದು ಇಂದಿನ ಎಲ್ಲ ಧರ್ಮಗಳ ಹಣೆ ಬರಹ ಆಗುತ್ತಿದೆ. ಇದಕ್ಕೆ ವೀರಶೈವ ಧರ್ಮಹೊರತಾಗಿಲ್ಲ. ವೀರಶೈವ ಸಮಾಜ ಕೃಷಿಪ್ರಧಾನವಾಗಿದ್ದು, ವ್ಯಾಪಾರ ಉದ್ಯೋಗಗಳಲ್ಲೂ ನಿರತರಾಗಿದ್ದರೂ ಹೇಳಿಕೊಳ್ಳುವಂಥ ಬೆಳವಣಿಗೆ ಆಗಿಲ್ಲ*. ಅದರ ಕಾರಣಗಳನ್ನು ಮುಂದೆ ನೋಡೋಣ.

ಇದಕ್ಕೆ ವೀರಶೈವ–ಲಿಂಗಾಯತ ಎರಡು ಭಿನ್ನ ಭಿನ್ನವೆಂದೂ, ಎರಡು ಒಂದೇ ಎಂದೂ ವಾದಿಸುವವರು ಇದ್ದಾರೆ. ಬಸವಣ್ಣನವರಿಂದಾಗಿ ವೀರಶೈವದಲ್ಲಿ ವೈಚಾರಿಕ ಬದಲಾವಣೆಯಾಯಿತು. ವೀರಶೈವ ಎಲ್ಲರಿಗಾಗಿ ಎನ್ನುವಂಥ ವಿಶಾಲತೆ ಒದಗಿತ್ತು. ಅದರಿಂದ ಅದು ಹೊದೆಂಬಂತೆ ಕಂಗೊಳಿಸಿತು. ಹಾಗೆ ನೋಡಿದರೆ ವೀರಶೈವ–ಲಿಂಗಾಯತದಲ್ಲ ವ್ಯತ್ಯಾಸ ಇಲ್ಲ. ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಎರಡೂ ಭಿನ್ನ ಎಂದು ಹೇಳಿ, ಒಡಕು ಹುಟ್ಟಿಸಿ ಸಮಾಜವನ್ನು ಒಡೆಯುವುದರಿಂದ ಯಾರಿಗೂ ಲಾಭವಿಲ್ಲ. ಸಮನ್ವಯದಿಂದ ಮಾತ್ರ ಪ್ರಗತಿ ಸಾಧ್ಯ ಎಂಬುದನ್ನು ಅರಿತು ನಡೆಯಬೇಕಾದ ಪರಿಸ್ಥಿತಿ ಇಂದು ಬಂದಿದೆ.

ಮಾನವ ಜನಾಂಗ ಸುಖ ಸಂತೋಷ್‌ದಿಂದ, ಶಾಂತಿ ನೆಮ್ಮದಿಯಿಂದ ಬಾಳಬೇಕೆಂದು ಧರ್ಮದ ಪರಿಕಲ್ಪನೆಯ ಹುಟ್ಟಿಗೆ ಕಾರಣ. ಅದು ಬೆಳೆಯಿತು, ಹರಡಿತು, ಜನಕ್ಕೆ ನೆಮ್ಮದಿ ನೀಡಿತು. ಆದರೆ ಮುಂದೆ ಅದರಲ್ಲಿ ಸ್ವಾರ್ಥ, ಸಂಕುಚಿತಬುದ್ಧ, ಪಕ್ಷಪಾತತನಗಳು ಬೆರೆತು ಮೂಲ ಅರ್ಥವೇ ಮರೆಯಾಯಿತು. ಮನಸ್ಸಿಗೆ ಬಂದಂತೆ ಅರ್ಥಗಳನ್ನು ಹಚ್ಚಿ, ಮನಸ್ಸಿಗೆ ಬಂದಂತೆ ನಡೆಯುವ ಮಾರ್ಗವಾಗಿ ಬೆಳೆಯಿತು. ದಿನಕಳೆದಂತೆ ಧರ್ಮ ಧರ್ಮಗಳ ನಡುವೆ ದ್ವೇಷ, ಸಂಘರ್ಷ, ಅಸೂಯೆ, ಅಹಂಗಳು ಬೆಳೆದುಬಂದವು. ಹೊಂದಾಣಿಕೆ ಎಂಬುದು ಶಬ್ದಕೋಶದಲ್ಲಿನ ಪದವಾಯಿತು.

ನಮ್ಮ ನಮ್ಮಲ್ಲಿನ ಹೊಂದಾಣಿಕೆಯ ಅಭಾವದಿಂದಾಗಿ ಹೊರಗಿನವರು ನಮ್ಮಲ್ಲಿ ನೆಲಸಿದರು, ನಮ್ಮನ್ನು ಆಳಿದರು, ನಮ್ಮ ನೆಲದ ಅರಸರು ಪರಕೀಯರ ಆಳಾಗಿ ಅವರ ಕೂಳಿಗೆ ಬಾಳುವಂತಾಯಿತು. ನಮ್ಮ ಪ್ರತಿಷ್ಠ, ನಮ್ಮ ಅಸೂಯೆ, ನನ್ನ ಧರ್ಮ ಹೆಚ್ಚು, ನಾನು ಹೆಚ್ಚು, ನನ್ನ ಪರಂಪರೆ ಹಿರಿದು. ಉಳಿದವರೆಲ್ಲ ತುಚ್ಛ ಎಂದು ಜಂಭದಿಂದ ಹೇಳಿಕೊಂಡ ನಾವು ನಮ್ಮನ್ನೇ ಮರೆತೆವು, ನಮ್ಮ ಇಡಿಯ ನಾಡನ್ನೇ ಮರೆತವು. ನೋಡನೋಡುತ್ತಿದ್ದಂತೆ ಪರರಿಗೆ ಗುಲಾಮರಾದೆವು. ಇತಿಹಾಸದಿಂದ ನಾವು ಕಲಿಯಬೇಕಾದ ಪಾಠ ಬಹಳ ಇದೆ.

* ಮರಾಠವಾಡಾ–1998 ರಾಜಶೇಖರ ಮಡಕಿ ಪುಟ–155

ಭಾರತ ಧರ್ಮಗಳ ತವರೂರು. ಹತ್ತಾರುಧರ್ಮ ಇಲ್ಲಿ ಹುಟ್ಟಿವೆ ಬೆಳೆದಿವೆ. ಹತ್ತಾರು ಧರ್ಮ ಹೊರಗಿಂದ ಬಂದಿವೆ ಇಲ್ಲಿ ಬಾಳಿವೆ. ಒಂದರೊಂದಿಗೆ ಇನ್ನೊಂದರ ತಾಳಮೇಳ ಇಲ್ಲ. ವ್ಯಕ್ತಿ ಪ್ರಾಧಾನ್ಯರ ಮುಂದೆ ಧರ್ಮ ಪ್ರಾಧಾನ್ಯ ಹಿಂದಾಗಿದೆ. ಅದನ್ನು ಬೇಕಾದಂತೆ ಬಳಸಿಕೊಳ್ಳಲಾಗುತ್ತಿದೆ.

ಈಗ ನೋಡಿ ವೀರಶೈವದಲ್ಲೇ ನಾನಾ ಉಪಧರ್ಮಗಳಿವೆ. ಜಂಗಮ, ಭಕ್ತ, ಪಂಚಮಸಾಲಿ, ಬಣಜಿಗ, ನೊಣಬ, ಗೌಡ ನಾನಾ ಉಪಪಂಗಡಗಳಿವೆ. ಜಂಗಮರಲ್ಲೇ ಮಠ, ಹಿರೇಮಠ, ಮಠಪತಿ, ಪತ್ರಿ, ಭೇದಗಳಿವೆ. ಒಬ್ಬರಿಗೆ ಒಬ್ಬರು ಸೇರಲಾರರು. ಜಂಗಮ–ಭಕ್ತರು ಕೂಡಿ ಒಂದೇ ಯೂನಿಟ್ ಆಗಿದ್ದದ್ದು ಇಂದು ಎರಡೂ ಭಿನ್ನ ಭಿನ್ನವಾಗಿವೆ. ವೀರಶೈವ ಎಂಬ ಸೂತ್ರದಲ್ಲಿದ್ದವರು ಇಂದು, ಲಿಂಗಾಯತ ಎನ್ನುತ್ತಿದ್ದಾರೆ. ವೀರಶೈವ ಅಲ್ಲ ಲಿಂಗಾಯತ ಎಂಬುದು ಒಂದು ವಾದ. ಲಿಂಗವನ್ನು ದೇಹದ ಮೇಲೆ ಆಯತ ಮಾಡಿಕೊಂಡವ ಲಿಂಗಾಯತ*[2].

ವೀರಶೈವರ ಇನ್ನೊಂದು ಸಮಸ್ಯೆ ಗುರು–ವಿರಕ್ತ ಗೊಂದಲ. ಶಿವನನ್ನೇ ಆರಾಧಿಸುವ ಇಬ್ಬರೂ ಒಂದೇ ಮನಸ್ಥಿತಿಯವರಾಗಿರಬೇಕು. ಇಬ್ಬರೂ ಇಷ್ಟಲಿಂಗ ಧರಿಸುವವರೇ. ಇಬ್ಬರ ಮಂತ್ರಗಳೂ ಒಂದೇ. ಆದರೆ ಇಬ್ಬರಲ್ಲಿ ಭೇದ ಏಕೆ? ನಾವು ಗುರುಗಳು ನಮಗೆ ಎಲ್ಲರೂ ಗೌರವಿಸಬೇಕು ಎಂಬುದು ಗುರುಪೀಠದವರ ವಾದ. ನಾವು ಯಾರಿಗೆ ಕಡಿಮೆ, ನಾವೇಕೆ ಇನ್ನೊಬ್ಬರಿಗೆ ವಿನಾಕಾರಣ ಗೌರವಿಸಬೇಕು? ಎಂಬುದು ವಿರಕ್ತರ ವಾದ.

ಇಬ್ಬರಿಗೂ ಧರ್ಮ ಮುಖ್ಯವಾಗಿದ್ದರೆ, ಭಕ್ತರ ಕಲ್ಯಾಣವೇ ಉದ್ದೇಶವಾಗಿದ್ದರೆ ಸಮನ್ವಯದತ್ತ ಒಲಿಯಬೇಕು. ತಮ್ಮ ತಮ್ಮ ರೇಶ್ಮೆಗುಡುಗಳಿಂದ ಹೊರಗೆ ಬರಬೇಕು. ಪ್ರಾಮಾಣಿಕತೆಯಿಂದ ವೀರಶೈವ ಸಮಾಜಕ್ಕೆ ಮಾಡಬೇಕಾದ ಸೇವೆಯನ್ನು ಮಾಡಬೇಕು. ಸಮಾಜದ ಯುವಕರನ್ನು ಸರಿದಾರಿಗೆ ತರಬೇಕು. ಧರ್ಮ ಮಾರ್ಗವನ್ನು ತಿಳಿಸಿಕೊಡಬೇಕು. ಸಂಘಟನೆ, ಐಕ್ಯತೆ, ಅರಿವು, ಸಹಕಾರ ತತ್ವವನ್ನು ಹಿರಿಯ ಉದ್ಯಮಿಗಳಿಗೆ ತಿಳಿಸಿಕೊಡಬೇಕು. ಕಲಿತವರಲ್ಲಿ, ವಿದ್ವಾಂಸರಲ್ಲಿ ಸಾಮಾನ್ಯ ಭಕ್ತರಲ್ಲಿ ಸಹಕಾರ ಬೆಳೆಯಬೇಕು. ಉಳಿದ ಸಮಾಜದಿಂದ ನೋಡಿ ಕಲಿಯಬೇಕು. ಅಂದಾಗ ಮಾತ್ರ ವೀರಶೈವ–ಲಿಂಗಾಯತ ವಿಶ್ವಧರ್ಮ ಆಗಲು ಸಾಧ್ಯ.

ವೀರಶೈವ ಸಮಾಜದಲ್ಲಿ ಇಂದು ಒಡಕು ಹುಟ್ಟಿಸುವ ಕೆಲಸ ನಡೆದಿದೆ. ಜಂಗಮರು–ಭಕ್ತರು ಎಂದೂ ಬೇರೆ ಬೇರೆ ಆಗಿ ಇರುವುದು ಸಾಧ್ಯವಿಲ್ಲ. ಅವರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಭಕ್ತರ ಎಲ್ಲ ಶುಭಕಾರ್ಯಗಳಿಗೆ ಜಂಗಮರು ಬೇಕೆ ಬೇಕು. ಜಂಗಮರ ಧರ್ಮ ಸೇವೆಗೆ ಭಕ್ತರ ಬೆಂಬಲ ಬೇಕೆ ಬೇಕು. ಆದರೆ ಇಂದು ಪರಿಸ್ಥಿತಿ ಬೇರೆಯಾಗಿದೆ. ಭಕ್ತರಿಗೆ ಜಂಗಮರ ಅಗತ್ಯವಿಲ್ಲ. ಜಂಗಮರಿಗೆ ಭಕ್ತರ ಅಗತ್ಯವಿಲ್ಲ ಎಂಬಂಥ ಸ್ಥಿತಿ ಬಂದಿದೆ. ಜಂಗಮರ ಸ್ಥಾನವನ್ನು ಬ್ರಾಹ್ಮಣ ಪಂಡಿತರು ಮತ್ತೆ ಪಡೆಯುತ್ತಿದ್ದಾರೆ. ಜಂಗಮರು ಪೂಜೆ–ಆಚಾರ–ಮಂತ್ರ–ಶಾಸ್ತ್ರಗಳನ್ನು ಬಿಡುತ್ತಿರುವಂತೆ ಕಾಣುತ್ತಿದೆ.

ಜಂಗಮರು ಹಿಂದುಳಿದ ವರ್ಗದಲ್ಲಿ ಸೇರಬೇಕೆಂಬ ಆಶೆ ವ್ಯಕ್ತಪಡಿಸಿದ್ದಾರೆ. ಮಠ, ಹಿರೇಮಠ, ಮಠಪತಿ, ಮಡಪತಿ, ಪತ್ರಿ ಇವರಲ್ಲಿ ಭಿನ್ನತೆ ಬೆಳೆದುದು ಕಂಡುಬರುತ್ತದೆ. ಕಾಯಕದ ಜಂಗಮರು ಇಂದು ಜಾತ್ರೆಯಲ್ಲಿ ಮಾತ್ರ (ಮುಳ್ಳಾವಿಗೆ, ಶಸ್ತ್ರಕಾಯಕ) ಕಾಣುತ್ತಾರೆ. ಇದಕ್ಕೆ ಭಕ್ತರೂ ಕಾರಣರಾಗಿದ್ದಾರೆ. ಬಕ್ತರಾದವರು ಜಂಗಮರಿಗೆ ಆಶ್ರಯನೀಡಿದಿದ್ದರೆ ಜಂಗಮರು ಏನು ಮಾಡಬೇಕು? ಅನಿವಾರ್ಯವಾಗಿ ಹೊಟ್ಟೆಹೊರೆವ ಇನ್ನೊಂದು ಕೆಲಸಕ್ಕೆ ಅವರು ತೆರಳಬೇಕಾಗುತ್ತದೆ. ಹಾಗಾದರೆ ಇಂದು ವೀರಶೈವ ಸಮಾಜ ಉಳಿಯುವುದು ಹೇಗೆ? ಇದರ ಚಿಂತನೆ ಗಂಭೀರವಾಗಿ ಎಲ್ಲಿಯೂ ನಡೆದಿಲ್ಲ. ಅಲ್ಲಿ ಇಲ್ಲಿ ಆಸ್ತಿವಂತ ಮಠಗಳಲ್ಲಿ ನಾಲ್ಕೆಂಟು ಜನ ಸೇರಿ ಚಿಂತಿಸಿದರೆ ಅದು ಫಲವಿಲ್ಲದಂತಾಗಿದೆ.

* ಸ್ವಪ್ನಲೋಕ ಏಪ್ರಿಲ್–2006–ಪುಟ–28

ಜಂಗಮರು–ಭಕ್ತರ ನಡುವೆ ಇಂದು ಕಂದಕ ನಿರ್ಮಾಣ ಆಗುತ್ತಿದೆ. ಗುರು–ವಿರಕ್ತರ ನಡುವೆ ಅಜ್ಞಾನದ ಕೋಲ್ಡವಾರ್ ನಡೆದಿದೆ. ಅದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾಗುತ್ತಿದೆ. ಮನಸ್ಸು ಒಡೆದು ದೂರವಾಗುತ್ತಿವೆ. ಈ ದಿಸೆಯಲ್ಲಿ ಜಗದ್ಗುರುಗಳ ಕಿವಿ ಮಾತು ಇಬ್ಬರ ಕಿವಿಗೂ ಮುಟ್ಟುತ್ತಿಲ್ಲ. ಇಬ್ಬರ ಸಮನ್ವಯವಿಲ್ಲದೆ ವೀರಶೈವರಿಗೆ ಗತಿ ಇಲ್ಲ ಎಂಬ ಮಾತು ಇಬ್ಬರಿಗೂ ತಿಳಿಯುತ್ತಿಲ್ಲ. ಮಠ ಪರಂಪರೆ ಹಾಳಾಗುತ್ತಿದೆ. ಅಂದರೆ ವೀರಶೈವ ಸಮಾಜ ಹಾಳಾಗುವುದೆಂದೇ ಅರ್ಥ. ಯಾಕೆಂದರೆ ಮುಂದೆ ಬರುವ ಪೀಳಿಗೆಗೆ ವೀರಶೈವ ಮಾರ್ಗವನ್ನು ಹೇಳಿಕೊಡುವವರು ಯಾರು? ಅರಿತು ಆಚರಿಸುವವರ ಮಾತನ್ನು ಕೇಳಬಹುದೇ ಹೊರತು ಢೋಂಗಿಗಳ ಮಾತನ್ನು ಯಾರು ಕೇಳುತ್ತಾರೆ?

ಇಂದು ವೀರಶೈವ ಸಮಾಜಕ್ಕೆ ಗತಿಯಿಲ್ಲದಂತಾಗಿದೆ. ತಂದೆ ತಾಯಿಗಳು ದುಡಿಯುವಲ್ಲಿ ಮಗ್ನರಾದರೆ, ಗುರುಹಿರಿಯರು ಗಳಿಕೆಯಲ್ಲಿ ನಿರತರಾಗಿದ್ದಾರೆ. ಈ ನಡುವೆ ಯುವಕರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ವೀರಶೈವ ಗೊತ್ತಿಲ್ಲ. ಯಾರು ತಿಳಿಸಿ ಹೇಳುವವರಿಲ್ಲ. ಯುವಕರು ಆಸೆ, ಆಮಿಷ್, ಲೋಭಗಳಿಗೆ ಬಲಿಯಾಗಿ ವಿಲಾಸಿ ಜೀವನದ ಬಲೆಗೆ ಬೀಳುತ್ತಿದ್ದಾರೆ. ತರತರದ ವ್ಯಸ್ನಗಳಿಗೆ ಬಲಿಬೀಳುತ್ತಿದ್ದಾರೆ. ಹಾಳಾಗುತ್ತಿದ್ದಾರೆ. ಉಳಿದ ಸಮಾಜ ಎಚ್ಚರವಾಗುತ್ತಿದೆ. ತನ್ನ ಕಾಲಮೇಲೆ ನಿಲ್ಲುತ್ತಿದೆ. ಹಿರಿಯರ ಮಾತನ್ನು ಪಾಲಿಸುತ್ತಿದೆ. ಸಹಾಯ ಸಹಕಾರದಿಂದ ಉದ್ಯೋಗ–ವ್ಯವಸಾಯದಲ್ಲಿ ಮುಂದೆ ನಡೆದಿದೆ. ಆದರೆ ವೀರಶೈವ ಸಮಾಜದಲ್ಲಿ ಇಂಥ ಲಕ್ಷಣ ಕಾಣುತ್ತಿಲ್ಲ. ಅವಿಸ್ವಾಸಿ, ವೈಯ್ಯಕ್ತಿಕ ಉನ್ನತಿ, ಸಂಶಯ ವೀರಶೈವರಲ್ಲಿ ಬೆಳೆಯುತ್ತಿದೆ. ಪರಸ್ಪರರಲ್ಲಿ ದೋಷಾರೋಪಣೆ, ಅಸಹಕಾರ ವೀರಶೈವ ರಾಜಕಾರಣದಲ್ಲಿನ ವಿಫಲತೆಗೆ ಕಾರಣವಾಗುತ್ತಿದೆ. ವೀರಶೈವರು ಮಹಾತ್ವಾಕಾಂಕ್ಷಿಗಳು, ದೂರಾಲೋಚೆಯುಳ್ಳವರು ಆಗಿ ಬೆಳೆಯುತ್ತಿಲ್ಲ. ಉಳಿದ ಸಮಾಜ ಹತ್ತು ಹೆಜ್ಜೆ ಮುಂದೆ ಹೋದ ಮೇಲೆ ವೀರಶೈವ ಸಮಾಜ ಒಂದು ಹೆಜ್ಜೆ ಮುಂದೆ ಇಡುತ್ತದೆ ಎಂದು ಹೇಳಲಾಗುತ್ತದೆ.

ಕೇವಲ ಐವತ್ತು ವರ್ಷಗಳ ಹಿಂದೆ ಸಂಪೂರ್ಣ ವರ್ಚಸ್ವ ಇದ್ದ ವೀರಶೈವ ವ್ಯಾಪಾರ; ಸಂಪೂರ್ಣ ಸೊಲ್ಲಾಪುರದ ಮೇಲೆ ಹಿಡಿತವಿದ್ದ ವೀರಶೈವರ ವ್ಯವಹಾರ ಇಂದು ಅತ್ಯಂತ ಕೆಳ ಸ್ಥಿತಿಗೆ ಬಂದಿದೆ. ಇದಕ್ಕೆ ಕಾರಣ ಏನು? ಒಂದೇ ಉದಾಹರಣೆ ನೋಡೋಣ.

ಚಾಟೀಗಲ್ಲಿ ಸಂಪೂರ್ಣ ವೀರಶೈವರ ಹಿಡಿತದಲಿದ್ದ ಬಟ್ಟೆ ಅಂಗಡಿಗಳ ಮಳಿಗೆ. ಒಂದು ಸಲ ಒಬ್ಬ ಮಾರವಾಡಿ ಬಂದ, ಅಲ್ಲ ಶ್ರೀಮಂತರೆ ನಿಮ್ಮಗೆ ನಾಲ್ಕು ಅಂಗಡಿಗಳಿವೆ. ಅದರಲ್ಲಿ ನನಗೆ ಒಂದು ಅಂಗಡಿಕೊಟ್ಟರೆ ಐನೂರು ಬಾಡಿಗೆ ಕೊಡುವತ್ತೇನೆ. "ವೀರಶೈವನ ಮನಸ್ಸು ಹೇಳಿತು. ಹೌರಲ್ಲ! ಒಂದು ಕೊಟ್ಟರೆ ಇನ್ನೂ ಮೂರು ಅಂಗಡಿ, ಮೇಲಿನ ಮನೆ ನನಗಿರುತ್ತದೆ. ಅದರಲ್ಲಿ ನನ್ನ ವ್ಯಾಪಾರ ನಡದೇ ನಡೆಯುತ್ತದೆ. ಒಂದು ಅಂಗಡಿ ಕೊಟ್ಟ. ಮೂರನೇ ವರ್ಷ; ಅಲ್ಲ ಸಾಹುಕಾರರೆ, ನನಗೆ ಇನ್ನೊಂದು ಅಂಗಡಿ ಕೊಟ್ಟರೆ ಎರಡು ಸಾವಿರ ಬಾಡಿಗೆ ಕೊಡ್ತಿನಿ. ದಯವಿಟ್ಟು ಕೊಡಿ" ಅಂದ ಮಾರವಾಡಿ. ಕೂತಲ್ಲೇ ಬಾಡಿಗೆ ಬರುತ್ತಲ್ಲ. ದುಡಿಯೋದಿಲ್ಲ, ದುಃಖಪಡೋದಿಲ್ಲ. ನನ್ನ ವ್ಯಾಪಾರದಿಂದಲೂ ಅಷ್ಟು ನಾನು ಗಳಿಸುವದಿಲ್ಲ ಎಂದು ಚಿಂತಿಸಿದ ವೀರಶೈವ ಎರಡನೇ ಅಂಗಡಿಯನ್ನು ಬಾಡಿಗೆಗೆ ಕೊಟ್ಟ. ಆರನೇ ವರ್ಷಕ್ಕೆ ಮೂರನೇ ಅಂಗಡಿ ಕೊಟ್ಟ. ಹತ್ತನೇ ವರ್ಷಕ್ಕೆ ನಾಲ್ಕನೇ ಅಂಗಡಿಯನ್ನೂ ಕೊಟ್ಟ. ನಲವತ್ತು ಸಾವಿರ ಬಾಡಿಗೆ. ಇಪ್ಪತ್ತನೇ ವರ್ಷಕ್ಕೆ ಮೇಲಿನ, ತಾನಿರುವ ಮನೆಯನ್ನೂ ಅವರಿಗೇ ಬಾಡಿಗೆಗೆ ಕೊಟ್ಟ. ಮೂವತ್ತನೇ ವರ್ಷಕ್ಕೆ ಎಲ್ಲವನ್ನೂ ಮಾರವಾಡಿಗೆ ಐವತ್ತು ಲಕ್ಷಕ್ಕೆ ಮಾರಿಬಿಟ್ಟ. ಎಲ್ಲ ವೀರಶೈವರ ಹಣೆಬರಹ ಹೆಚ್ಚುಕಮ್ಮಿ ಹೀಗೆ ಆಯಿತು. ಇಂದು ಚಾಟಿಗಲ್ಲಿಯ ಸಂಪೂರ್ಣ ಹಿಡಿತ ಮಾರವಾಡಿಗಳ ಕೈಯ್ಯಲ್ಲಿ! ಐವತ್ತು ವರ್ಷಗಳಲ್ಲಿ ವೀರಶೈವರ ಚಿತ್ತವೇ ಬದಲಾಯಿತು. ಸಾಮಾಜಿಕ, ಧಾರ್ಮಿಕ, ವ್ಯಾಪಾರ, ಉದ್ಯೋಗ, ಕಾರ್ಖಾನೆ, ರಾಜಕೀಯ, ಶೈಕ್ಷಣಿಕೆ ಕ್ಷೇತ್ರಗಳಲ್ಲಿ ಹಿನ್ನಡೆ ಕಾಣುವಂತಾಯಿತು.

ಒಂದು ಧರ್ಮವಾಗಲಿ–ಜನಾಂಗವಾಗಲಿ–ದೇಶವಾಗಲಿ–ಮನೆತನವಾಗಲಿ ಬಹಳ ಎತ್ತರಕ್ಕೆ ಏರಿದಮೇಲೆ ಕೆಳಮುಖವಾಗಿ ಇಳಿಯಲು ಆರಂಭಿಸುತ್ತದೆ ಎಂದು ಹೇಳುತ್ತಾರೆ. ಇದು ತಪ್ಪು ಕಲ್ಪನೆ. ಕಾಲಕ್ಕೆ ತಕ್ಕಂತೆ ನಮ್ಮ ವಿಚಾರಗಳಲ್ಲಿ, ಶಿಕ್ಷಣ ಕ್ರಮದಲ್ಲಿ, ಉದ್ದಿಮೆ ವಿಸ್ತಾರದಲ್ಲಿ, ರಾಜಕೀಯ ಜಾಣತನದಲ್ಲಿ, ಧಾರ್ಮಿಕ ತಿಳುವಳಿಕೆಯಲ್ಲಿ, ಆರ್ಥಿಕ ವಿಚಾರಗಳಲ್ಲಿ ಬದಲಾವಣೆ ಮಾಡಿಕೊಳ್ಳುತ್ತ ಹೋದವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಯಶಸ್ವಿಯಾಗುತ್ತಾರೆ. ಕಂಪ್ಯೂಟರ್ ಯುಗದಲ್ಲಿ ನಾನು ಬೆರಳೆಣಿಸಿ ಲೆಕ್ಕ ಮಾಡುತ್ತೇನೆ ಎಂದರೆ ತಪ್ಪಾಗುತ್ತದೆ.

ಇಂದು ಸೊಲ್ಲಾಪುರದಲ್ಲಿ ವೀರಶೈವ–ಲಿಂಗಾಯತರ ಸಂಖ್ಯೆ ಗಣನೀಯವಾಗಿದೆ. ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರವಾಗಿದೆ.

ಸಾಮಾಜಿಕ ಜೀವನದಲ್ಲಿ ವೀರಶೈವ ಮಧ್ಯಮ ವರ್ಗದವರಾಗಿದ್ದಾರೆ. ಬೇಕಾದ ಕೆಲಸವನ್ನು ಅವರು ಮಾಡುವಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ಹೊರಗಿನಿಂದ ಬಂದ ವೀರಶೈವರು ಇಲ್ಲಿ ಬಹಳ. ತಮ್ಮ ಪರಿಶ್ರಮದಿಂದ ದೊಡ್ಡ ಸ್ಥಾನವನ್ನು ಮುಟ್ಟಿದ್ದಾರೆ. ಸೊಲ್ಲಾಪುರದ ಹೆಸರನ್ನು ಉನ್ನತಮಟ್ಟಕ್ಕೆ ಏರಿಸಿದ್ದಾರೆ. ಶೇಟೆ, ದೇಶಮುಖ, ಅಬ್ದುಲಪುರಕರ, ವಾರದ, ಕಾಡಾದಿ, ಬಸವಂತಿ, ಉಂಬರಜೆ, ಲಿಂಗಶೆಟ್ಟಿ, ದರ್ಗೋಪಾಟೀಲ, ಥಳಂಗೆ, ಥೋಬಡೆ, ಮುಂತಾದ ಒಂದೊಂದು ಮನೆತನವೂ ಸೊಲ್ಲಾಪುರದ ಕೀರ್ತಿಗೆ ಕಿರೀಟ ಪ್ರಾಯವಾದ ಕೆಲಸ ಮಾಡುತ್ತ ಬಂದಿವೆ. ತಮ್ಮ ಹಿರಿಯರು ಏನೇನು ಕೆಲಸ ಮಾಡಿದ್ದಾರೆ ಎಂಬುದು ಇಂದಿನ ಪೀಳಿಗೆಯವರಿಗೆ ಈಗ ಗೊತ್ತಿಲ್ಲ. ಇನ್ನಾದರೂ ವೀರಶೈವರು ಇದನ್ನು ತಿಳಿದುಕೊಳ್ಳಬೇಕು.

ಹಾಗೆಂದ ಮಾತ್ರಕ್ಕೆ ಇಂದಿನವರು ಏನೂ ಮಾಡಿಲ್ಲ ಎಂದು ಅರ್ಥವಲ್ಲ. ಹಿಂದಿನವರು ಉನ್ನತ ಸ್ಥಾನಮಾನವನ್ನು ಪಡೆಯಲು ಮಾಡಿದ್ದೇನು? ಸತತ ಪರಿಶ್ರಮ, ನಿಷ್ಠೆ, ಪ್ರಾಮಾಣಿಕತೆ, ಪಾರದರ್ಶಿ ವ್ಯವಹಾರ, ವಿಶ್ವಾಸ, ನಂಬಿಕೆ. ಸರಿಯಾದ ಲೆಕ್ಕಪತ್ರ, ಧರ್ಮದ ನಂಬಿಕೆ, ದಾನಗುಣಗಳಿಂದ – ಎಂಬುದನ್ನು ಅರಿಯಬೇಕು.

ಸಾಮಾಜಿಕ ಬೆಳವಣಿಗೆಯಲ್ಲಿ ವೀರಶೈವರು ನಿಜವಾಗಿಯೂ ಆಶಾದಾಯಕವಾದ ಮಾರ್ಗವನ್ನು ಹಿಡಿದಿದ್ದಾರೆ. ತಾನು ಬೆಳವಣಿಗೆ ಹೊಂದಿದರೆ ಸಮಾಜ ಬೆಳವಣಿಗೆ ಹೊಂದುತ್ತದೆ ಎಂಬ ಧೋರಣೆಯಿಂದ ವೀರಶೈವ ಯುವಕರು ತಮ್ಮ ಕಾಲಮೇಲೆ ನಿಲ್ಲುವಂಥ, ತಮ್ಮಿಂದ ಸಾಧ್ಯವಾಗುವಂಥ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆಲಸ ಮಾಡುವಲ್ಲಿ ವೀರಶೈವರು ಮೈಗಳ್ಳತನ ತೋರಿಸುವುದಿಲ್ಲ. ಕಂಪನಿಗಳಲ್ಲಿ ಕೆಲಸ ಇರಲಿ, ಮಾರ್ಕೆಟ್ ಯಾರ್ಡ ಕೆಲಸ ಇರಲಿ, ಇತರ ಕಡೆಗಳಲ್ಲಿ ಕೆಲಸ ಇರಲಿ ಅವರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ಅಂತೆಯೇ ಅವರು ಮೂವತ್ತು ನಲವತ್ತು ವರ್ಷ ಒಂದೇ ಕಡೆ ಕೆಲಸ ಮಾಡಲು ಸಾಧ್ಯವಾಗಿದೆ. ಅವರು ಗಳಿಸಿರುವ ಈ ವಿಶ್ವಾಸ ಬಹಳ ಮುಖ್ಯ.

ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ವೀರಶೈವ ಯುವಕರು ಉತ್ಸಾಹದಿಂದ ಭಾಗವಹಿಸುವುದನ್ನು ನೋಡಿ ನನಗೆ ಬಹಳ ಹೆಮ್ಮೆ ಅನಿಸಿದೆ. ರಕ್ತದಾನಿಗಳ ಪ್ರತಿಷ್ಠಾನ, ಪ್ರದೂಷಣ ಹಟಾವ್ ಚಳವಳಿ, ಅಹಿಂಸಾ ಮಂಡಳ, ಅಂಧಶ್ರದ್ಧಾ ನಿರ್ಮೂಲನ ಸಮಿತಿ, ಯೋಗ ಶಿಕ್ಷಣ, ಸಾರ್ವಜನಿಕ ವಾಚನಾಲಯ, ವಧು–ವರ ಸೂಚಕ ಮಂಡಳ, ಪಂಜಾಬ ಶಾಂತಿ ಯಾತ್ರೆ, ನೂರಕ್ಕಿಂತ ಹೆಚ್ಚುಸಲ ರಕ್ತದಾನ ಮಾಡಿದವರು, ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ನೀಡುವುದು–ಇವೆಲ್ಲ ಒಂದು ಸಮಾಜದ ಇಂದಿನ ಮೂಲಭೂತ ಬೇಡಿಕೆಗಳಾಗಿವೆ. ಇವುಗಳಲ್ಲಿ ಸೇವೆ ಸಲ್ಲಿಸುವುದೆಂದರೆ ಆ ಸಮಾಜವನ್ನು ಮುಂದೆ ಪ್ರಗತಿಯತ್ತ ನಡೆಸುವುದೆಂದೇ ಅರ್ಥ.

ಅದೇ ರೀತಿ ವೀರಶೈವ ಯುವಕರ ಇನ್ನೊಂದು ಗುಣ ಎಂದರೆ ಪರಂಪರೆಯ ಮನೆತನದ ವ್ಯವಸಾಯವನ್ನು ಮುಂದುವರಿಸಿಕೊಂಡು ನಡೆದದ್ದು. ಇಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯವಹಾರವಾಗಲಿ, ಬೆಳ್ಳಿ–ಬಂಗಾರ ವ್ಯಾಪಾರವಾಗಲಿ, ಹಾರ್ಡವೇರ್ ವ್ಯಾಪಾರವಾಗಲಿ, ಬಟ್ಟೆ ವ್ಯಾಪಾರವಾಗಲಿ–ತಂದೆಯಿಂದ ಮಗ, ಮಗನಿಂದ ಮೊಮ್ಮಗ–ಹೀಗೆ ಮುಂದುವರಿಸಿಕೊಂಡು ಬಂದಿದ್ದಾರೆ. ಇದು ಒಂದು ದೃಷ್ಟಿಯಿಂದ ಒಳ್ಳೆಯದೆ. ಸಹಜವಾಗಿ ಸರಳವಾಗಿ ಅವರ ಮನೆತನದ ಉದ್ಯೋಗ ಅವರಿಗೆ ಬಾಲ್ಯದಿಂದ ಕಲಿಯಲು ಸಾಧ್ಯವಾಗಿರುತ್ತದೆ. ಅದರಲ್ಲಿ ಮುಂದುವರಿಯಲೂ ಸಾಧ್ಯವಾಗುತ್ತದೆ. ಇದರ ಒಂದು ದೋಷವೆಂದರೆ ಇಂಥ ಮಕ್ಕಳು ಉನ್ನತ ಶಿಕ್ಷಣ ಪಡೆಯದೇ ಇರುವುದು. ಇವರು ಪದವಿಯ ಮೊದಲನೇ ವರ್ಷದ ವರೆಗೆ ಮಾತ್ರ ಶಿಕ್ಷಣ ಪಡೆಯುತ್ತಾರೆ.

ಸೊಲ್ಲಾಪುರದ ವೀರಶೈವರ ರಾಜಕೀಯ ಸಾಧನೆ ಗಮನಾರ್ಹವಾಗಿದೆ. ಸಾಮಾಜಿಕ ಕ್ಷೇತ್ರದಲ್ಲಿ ಹೆಸರುಗಳಿಸಿರುವ ಅವರು ರಾಜಕೀಯ ಕ್ಷೇತ್ರದಲ್ಲಿಯೂ ಬರಲು ಸಾಧ್ಯವಾಯಿತು. ರಾಷ್ಟ್ರರಾಜಕಾರಣದಲ್ಲಿ, ರಾಜ್ಯ ರಾಜಕಾರಣದಲ್ಲಿ ಹಾಗೂ ನಗರ ರಾಜಕಾರಣದಲ್ಲಿ ಅವರು ಸಕ್ರಿಯವಾಗಿದ್ದಾರೆ. ಶ್ರೀ ಅಪ್ಪಾಸಾಹೇಬ ಕಾಡಾದಿ ಅವರು ಎಂ.ಪಿ. ಆಗಿ ರಾಷ್ಟ್ರ ರಾಜಕಾರಣರಲ್ಲಿ ಹೆಸರುಗಳಿಸಿದರೆ, ಶ್ರೀ ಬಾಬುರಾವ ಚಾಕೋತೆ, ಶ್ರೀ ವಿರೂಪಾಕ್ಷ ಶಿವದಾರೆ, ಶ್ರೀ ವಿಜಯ ದೇಶಮುಖ, ಶ್ರೀ ರತಿಕಾಂತ ಪಾಟೀಲ, ಶ್ರೀ ವಿಶ್ವನಾಥ ಚಾಕೋತೆ, ಶ್ರೀ ಶಿವಶರಣ ಪಾಟೀಲ ಮುಂತಾದವರು ರಾಜ್ಯ ರಾಜಕಾರಣದಲ್ಲಿ ಎಂ.ಎಲ್.ಎ. ಗಳಾಗಿ ಹೆಸರುಗಳಿಸಿದ್ದಾರೆ. ನಗರ ರಾಜಕೀಯದಲ್ಲಿ ಶ್ರೀ ವಿಶ್ವನಾಥಪ್ಪ ಬನಶೆಟ್ಟಿ, ಶ್ರೀ ಬಂಡಪ್ಪ ಮುನಾಳೆ, ಶ್ರೀ ಸಿದ್ಧರಾಮ ಚಾಕೋತೆ, ಶ್ರೀ ಶಿವಶಂಕರ ಕಂಠೀಕರ ಸ್ವಾಮಿ, ಶ್ರೀ ಭೀಮಾಶಂಕರ ಕೆಂಗನಾಳಕರ್, ಶ್ರೀ ಸಿದ್ರಾಮಪ್ಪ ಪಾಟೀಲ, ಸೌ. ಶೋಭಾ ಬನಶೆಟ್ಟಿ, ಶ್ರೀ ವೀರಭದ್ರೇಶ ಬಸವಂತಿ, ಶ್ರೀ ರಾಜಶೇಖರ ಚಡಚಣಕರ ಶ್ರೀ ಪ್ರಕಾಶ ವಾಲೆ, ಶ್ರೀ ಅಪ್ಪಾಸಾಹೇಬ ಹತ್ತೂರೆ, ಶ್ರೀ ಮಹಾದೇವ ಗಂಭೀರೆ, ಶ್ರೀ ಬಾಳಾ ಸಾಹೇಬ ಘೋಂಗಡೆ, ಶ್ರೀ ಸಂಗಪ್ಪಣ್ಣ ಕೆಂಗನಾಳಕರ, ಶ್ರೀ ಅಪ್ಪಾಸಾಹೇಬ ಚೌಗುಲೆ, ಶ್ರೀ ಅಪ್ಪಾಶಾ ಮೇತ್ರೆ, ಶ್ರೀ ಹರೀಷ್ ಪಾಟೀಲ, ಶ್ರೀ ಭೀಮಾಶಂಕರ ಮೇತ್ರೆ, ಸೌ. ಶೋಭಾ ನಷ್ಟೆ, ಶ್ರೀ ಜಗದೀಶ ಪಾಟೀಲ, ಶ್ರೀ ಶಿವಗೊಂಡ ಪಾಟೀಲ, ಸೌ. ಶೈಲಾ ಸ್ವಾಮಿ, ಶ್ರೀ ಶ್ರೀಶೈಲ ತುಪ್ಪದ ಶ್ರೀ ಚಿದಾನಂದ ಒಣರೊಟ್ಟಿ, ಶ್ರೀ ಸುರೇಶ ತಮಸೆಟ್ಟಿ, ಶ್ರೀ ಕೇದಾರ ಉಂಬರಜೆ, ಸಾ ಸರೋಜಿನಿ ಜವಳೆ, ಸೌ. ಜಯಶ್ರೀ ನಿಂಬರ್ಗಿ.

ಮುಂತಾದವರು ನಗರ ರಾಜಕೀಯದಲ್ಲಿ, ನಗರದ ಮಹಾಪೌರರಾಗಿ, ಸ್ಥಾಯಿ ಸಮಿತಿ ಸದಸ್ಯರಾಗಿ, ವಿವಿಧ ಮಂಡಳಗಳ ಸಭಾಸದರಾಗಿ, ನಗರ ಸೇವಕರಾಗಿ ಸೊಲ್ಲಾಪುರ ನಗರದ ಅಭಿವೃದ್ಧಿಯಲ್ಲಿ ತಮ್ಮಿಂದಾದ ಸಹಾಯ ಸಹಕಾರವನ್ನು ಮಾಡಿದ್ದಾರೆ. ಮಾಡುತ್ತಿದ್ದಾರೆ.

ರಾಜಕಾರಣದಲ್ಲಿ ಈಗ ಬಂದಿರುವ ಸಮಸ್ಯೆ ಎಂದರೆ ನಮ್ಮ ಯುವಕರಿಗೆ ಒಬ್ಬ ಯೋಗ್ಯವಾದ ಮಾರ್ಗದರ್ಶಕನ ಕೊರತೆ. ಒಬ್ಬ ಯೋಗ್ಯವಾದ ನೇತಾರನ ಕೊರತೆ. ಒಬ್ಬ ಯೋಗ್ಯವಾದ ಮುಂದಾಳುವಿನ ಕೊರತೆ. ಶಿಸ್ತು, ದಕ್ಷತೆ, ಮಹತ್ವಾಕಾಂಕ್ಷೆ, ಸಂಘಟನಾ ಚಾತುರ್ಯ, ಮಾತಿನ ಜಾಣ್ಮೆ, ಪಾದರಸದಂಥ ವ್ಯಕ್ತಿತ್ವ, ಚುಂಬಕದಂಥ ಆಕರ್ಷಣ ಶಕ್ತಿ, ನುಡಿದಂತೆ ನಡೆಯುವ ಗುಣ–ಇವೆಲ್ಲ ಒಬ್ಬ ಯೋಗ್ಯ ನೇತಾರನಲ್ಲಿರಬೇಕು. ಅಂಥವನ ಮಾರ್ಗದರ್ಶನ ಯುವಕರಿಗೆ ಸಿಗಬೇಕು. ಆಗ ಒಂದು ದೊಡ್ಡ ರಾಜಕೀಯ ಬಲ ಸಿದ್ಧವಾಗುತ್ತದೆ.

ಯುವಕರಲ್ಲಿ ಜಾಗೃತಿ ಮೂಡಬೇಕು. ಅವರು ಸುಸಂಘಟಿತರಾಗಬೇಕು. ದೂರದೃಷ್ಟಿ ಇರಬೇಕು.

ಜಾತ್ರೆ–ಉತ್ಸವಗಳಲ್ಲಿ ಯಾವರೀತಿಯ ಐಕ್ಯತೆ, ಒಕ್ಕಟ್ಟು ಇರುವುದೋ ಅದೇ ರೀತಿಯ ಒಕ್ಕಟ್ಟು ರಾಜಕಾರಣದಲ್ಲೂ ಇರಬೇಕು. ಅಂದಾಗ ನಮ್ಮ ಒಬ್ಬ ಮುಂದಾಳು ಆರಿಸಿಬರಲು ಸಾಧ್ಯ.

ಒಂದು ಸ್ಥಳಕ್ಕೆ ಸ್ಪರ್ಧೆ ನಡೆದಾಗ ಮೂರು ನಾಲ್ಕು ಜನ ಆ ಕಣಕ್ಕೆ ಇಳಿಯಬಾರದು. ಇದರಿಂದ ಖಂಡಿತವಾಗಿ ಮೂರನೆಯವನಿಗೆ ಲಾಭವಾಗುತ್ತದೆ. ಇದನ್ನು ವೀರಶೈವರು ಅರಿತುಕೊಳ್ಳಬೇಕು. ಇದರಿಂದಾಗಿಯೇ ವೀರಶೈವ ರಾಜಕಾರಣದಲ್ಲಿ ಹಿನ್ನಡೆ ಆಗುತ್ತಿರುವುದನ್ನು ಗಮನಿಸಬೇಕು. ರಾಜಕಾರಣದ ಬಗ್ಗೆ ಹೆಚ್ಚು ಮಾತಾಡದಿರುವುದೇ ಒಳ್ಳೆಯದು.

ಸೊಲ್ಲಾಪುರದ ವೀರಶೈವರು ಧಾರ್ಮಿಕ ಸ್ವಭಾವದವರು. ದೇವರು, ಧರ್ಮ, ಶರಣರು, ಸಂತರನ್ನು ಗೌರವದಿಂದ ಕಾಣುವ ಪ್ರವೃತ್ತಿಯವರು. ಕೊರಳಲ್ಲಿ ಲಿಂಗ, ಹಣೆಗೆ ಭಸ್ಮ, ತಲೆಗೆ ರೂಮಾಲು, ಧೋತರ ಬಿಳಿ ಅಂಗಿ ಇದು ಹಳೆಯ ತಲೆಮಾರಿನ ವೀರಶೈವರ ವೈಶಿಷ್ಟ್ಯ. ಇಂದು ಹಣೆಗೆ ಭಸ್ಮ ಧರಿಸುವುದು ಅವರ ಹೊಸ ತಲೆಮಾರಿನ ಲಕ್ಷಣ. ಇಂದು ಸೊಲ್ಲಾಪುರದ ಐವತ್ತರಷ್ಟು ವೀರಶೈವರು ಲಿಂಗ ಧಾರಣೆ ಮಾಡುವುದಕ್ಕೆ, ಹೊಟಗಿ ಅಪ್ಪಗಳು ಕಾರಣ. ಏಕೆಂದರೆ ಭಸ್ಮ ಧರಿಸದವರಿಗೆ ಅವರು ಹತ್ತಿರ ಬರಗೊಡುವುದಿಲ್ಲ. ! ಇಲ್ಲಿನ ವೀರಶೈವರ ಇನ್ನೊಂದು ವೈಶಿಷ್ಟ್ಯ ಎಂದರೆ 68 ಲಿಂಗಗಳ ದರ್ಶನ. ಬರಿಗಾಲಲ್ಲಿ ಶ್ರೀಶೈಲ ಯಾತ್ರೆ. ಸಾವಿರಾರು ಯುವಕರು ಪ್ರತಿವರ್ಷ ಶ್ರೀಶೈಲಕ್ಕೆ ಕಾಲ್ನಡಿಗೆಯಲ್ಲಿ ಹೊರಡುತ್ತಾರೆ. ಇದು ಅವರ ನಿಷ್ಠೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಪ್ರತಿವರ್ಷ ನಡೆಯುತ್ತವೆ. ಅದರಲ್ಲಿ ಸಾಕಷ್ಟು ವೀರಶೈವರು ಕೇಳಲು ಸೇರುತ್ತಾರೆ. ಅಷ್ಟ ವಿನಾಯಕ ದರ್ಶನ. ಹನ್ನೆರಡು ಜೋತಿರ್ಲಿಂಗ ದರ್ಶನ ಅವರ ಧ್ಯೇಯವಾಗಿರುತ್ತದೆ.

ಸಿದ್ಧರಾಮೇಶ್ವರರ ಜಾತ್ರೆ ಸಂದರ್ಭದಲ್ಲಿ ವೀರಶೈವ ಯುವಕರು ಶುದ್ಧ ಧಾರ್ಮಿಕವಾಗಿ ನಡೆದುಕೊಳ್ಳುತ್ತಾರೆ. ನಂದಿಕೋಲು ಹಿಡಿಯುವ ಸಿದ್ಧತೆ, ಪ್ರಾಕ್ಟೀಸ್ ಮಾಡುತ್ತಾರೆ. ಉತ್ಸವ ಕಾಲಕ್ಕೆ ಅವರ ವೀರಶೈವರು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ. ಅಸಂಖ್ಯೆ ಶಾಲೆ, ಕಾಲೇಜು, ತಾಂತ್ರಿಕ ಕಾಲೇಜು, ಫಾರ್ಮಶಿ ಕಾಲೇಜು, ಖಾಸಗಿ ತಾಂತ್ರಿಕ ತರಬೇತಿ ಸಂಸ್ಥೆಗಳು ಸಾವಿರಾರು ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿದೆ. ಇಂಥ ಶಾಲೆ ಕಾಲೇಜುಗಳಲ್ಲಿ ಸುಮಾರು ನಲವತ್ತರಿಂದ ಐವತ್ತು ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇದು ಸಣ್ಣ ಸಾಧನೆ ಅಲ್ಲ. ಮಹತ್ವದ ಸಾಧನೆ.

ಇಲ್ಲಿ ಕಲಿಸುವ ಶಿಕ್ಷಕರು ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ನಗರ ಪ್ರಶಸ್ತಿ, ಸಂಘ ಸಂಸ್ಥೆಗಳಿಂದ ಪ್ರಶಂಸೆಯ ಪ್ರಶಸ್ತಿಗಳನ್ನು ಪಡೆದ ಆದರ್ಶ ಶಿಕ್ಷಕರಾಗಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳೂ ಸಹ ರಾಷ್ಟ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹೆಸರು ಗಳಿಸುತ್ತಿದ್ದಾರೆ. ಇದು ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿ ಎಂದು ಹೇಳಬೇಕು.

ಪೋಷಾಕು ವಿಶಿಷ್ಟವಾಗಿರುತ್ತದೆ. ಬಾರಾಬಂದಿ ಅಂಗಿ, ದೊಡ್ಡ ರುಂಬಾಲು, ಕಚ್ಚೆ ಹಾಕಿದ ಧೋತರ, ಬಿಳಿಯ ಶಲ್ಲೆ ಇವುಗಳಿಂದ ದೇವಾಲಯವು ಅಚ್ಚ ಬಿಳಿ ಹಾಲಿನ ಸಾಗರದಂತೆ ಕಾಣುತ್ತದೆ. ಈ ಸಮಯದ ಅವರ ಐಕ್ಯತೆ, ಒಕ್ಕಟ್ಟು ಇನ್ನೊಬ್ಬರಿಗೆ ಹೊಟ್ಟೆಕಿಚ್ಚಾಗುವಂತಿರುತ್ತದೆ. ಶ್ರೀ ಸಿದ್ಧರಾಮೇಶ್ವರ ಪೂಜಾರಿಗಳಾದ ಹಬ್ಬು ಅವರಿಗೆ, ಮಾನಕರಿಗಳಾದ ಶ್ರೀ ಶೆಟ್ಟಿ ಹಾಗೂ ಶ್ರೀ ದೇಶಮುಖ ಅವರಿಗೆ ಬಹಳ ಗೌರವದಿಂದ ಕಾಣುತ್ತಾರೆ.

ಸೊಲ್ಲಾಪುರದಲ್ಲಿ ಧಾರ್ಮಿಕ ಕೆಲಸದಷ್ಟೇ ಮಹತ್ವದ್ದಾಗಿ "ವಧು–ವರ" ಸೂಚಕ ಮಂಡಳಗಳು ಕಾರ್ಯಮಾಡುತ್ತಿವೆ. ವೀರಶೈವ ಸಮಾಜದಲ್ಲಿ ವಧುವಿಗೆ ವರ, ವರನಿಗೆ ವಧು ಹುಡುಕುವುದು ಬಹಳ

ಕಷ್ಟದ ಕೆಲಸ. ನೂರಾರು ಕಡೆ ನೋಡಿದರೂ ಒಂದೂ ಜೋಡಿ ಕೂಡುವುದಿಲ್ಲ. ಈ ಸಂಕಟವನ್ನು ತಿಳಿದವರು ಇಂದು "ವಧು-ವರ" ಸಂಸ್ಥೆಯನ್ನು ಆರಂಭಿಸಿ ವೀರಶೈವರ ಈ ಸಂಕಟವನ್ನು ದೂರ ಮಾಡುವಲ್ಲಿ ಸಹಾಯಕರಾಗಿದ್ದಾರೆ.

ಅನೇಕ ಸಾಮಾಜಿಕ ಸಂಸ್ಥೆಗಳು ಹುಟ್ಟಿ ಬೆಳೆದು, ಉಚಿತ ಕನ್ನಡ ಕಲಿಸುವದನ್ನು, ಯೋಗ ಶಿಬಿರ ನಡೆಸುವುದನ್ನೂ, ವ್ಯಾಖ್ಯಾನ ಮಾಲೆ ನಡೆಸುವುದನ್ನೂ, ಗ್ರಂಥಾಲಯ ನಡೆಸುವುದನ್ನೂ ಸಂಚಾರಿ ವಾಚನಾಲಯ ನಡೆಸುವುದನ್ನೂ-ಸ್ವ ಇಚ್ಛೆಯಿಂದ ಮಾಡುತ್ತಿವೆ. ಒಂದು ಸಮಾಜದ ಬೆಳವಣಿಗೆಗೆ ಇದು ತುಂಬ ಮಹತ್ವದ ಕೆಲಸವಾಗುತ್ತದೆ.

ವೀರಶೈವ ಶಿಕ್ಷಕರು ಪ್ರಾಮಾಣಿಕತೆಯಿಂದ ಕಲಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಅಂತೆಯೇ ಇಂದಿಗೂ ಸಿದ್ಧೇಶ್ವರ ಪ್ರಶಾಲೆಯ ಶ್ರೀ ಎಲಾಜಾ ಮಾಸ್ತರರಿಗೆ 'ಗುರು' ಎಂದು ಭಾವಿಸುವವರು ಇದ್ದಾರೆ. ಒಂದೊಂದು ಶಾಲೆಯ ಮುಖ್ಯೋಪಾಧ್ಯಾಪಕ, ಕಾಲೇಜಿನ ಪ್ರಾಚಾರ್ಯ ಚಲಿಸುವ ವಿಶ್ವಕೋಷದಂತೆ ಇರಬೇಕು. ಜತೆಗೆ ಶಿಕ್ಷಕರು ಕಲಿಯುವುದನ್ನೇ ಧರ್ಮ ಎಂದು ಕಲಿಸುವುದನ್ನೇ ಪೂಜೆ ಎಂದು ಭಾವಿಸಬೇಕು. ವೈಕ್ತಿಕ ಜೀವನವನ್ನು ಶುದ್ಧವಾಗಿರಿಸಿಕೊಳ್ಳಬೇಕು. ಅದು ಇಂದಿನ ಅಗತ್ಯವಾಗಿದೆ. ಏಕೆಂದರೆ ಶಿಕ್ಷಕನಿಗೆ "ವೈಯಕ್ತಿಕ" ಎಂಬುದು ಇರುವುದಿಲ್ಲ.

ಕೋರ್ಟು ಕಛೇರಿಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಖಟ್ಲೆಗಳು ವೀರಶೈವರದೇ ಇರುತ್ತವೆ-ಎಂಬ ಮಾತು ಕೇಳಿ ಬಂತು. ವೀರಶೈವ ನ್ಯಾಯವಾದಿಗಳು ಈ ಮಾತನ್ನು ಸುಳ್ಳು ಮಾಡಬೇಕು. ಅಗತ್ಯವಿದ್ದಲ್ಲಿ ಮಾತ್ರ ಕೋರ್ಟಿನ ಮೆಟ್ಟಿಲು ಹತ್ತಬೇಕು ಎಂದು ಎಲ್ಲರಿಗೂ ಅನಿಸುವ ಮಾತು.

ಸೊಲ್ಲಾಪುರದ ವೀರಶೈವ ವೈದ್ಯರು ಪ್ರಸಿದ್ಧ ಹೆಸರನ್ನು ಪಡೆದಿದ್ದಾರೆ. ಸೂಪರ್ ಸ್ಪೇಷಾಲಿಟಿ ಡಿಗ್ರಿ ಪಡೆದವರಾಗಿದ್ದಾರೆ. ರೋಗಿಗಳಿಗೆ ಅಗತ್ಯ ಸೇವೆ ನೀಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಆದರೆ ಅವರಲ್ಲಿ ಒಂದು ಸಂಘಟನೆ ಇಲ್ಲದಂತಾಗಿದೆ. ತಿಂಗಳಿಗೊಮ್ಮೆಯಾದರೂ ಅವರೆಲ್ಲ ಒಂದೆಡೆ ಸೇರಲು ಅವರಿಂದ ಆಗುತ್ತಿಲ್ಲ. ಸಮಾಜಕ್ಕಾಗಿ ಸ್ವಲ್ಪ ಸಮಯವನ್ನು ಅವರು ನೀಡಬೇಕು.

ಸೊಲ್ಲಾಪುರದ ವೀರಶೈವ ಪತ್ರಕರ್ತರು ಅನೇಕ ರಾಷ್ಟ್ರೀಯ ಮಟ್ಟದ, ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದು ಹೆಸರು ಗಳಿಸಿದ್ದಾರೆ. ಸಂಪಾದಕರಾಗಿ, ಸಹ ಸಂಪಾದಕರಾಗಿ, ಉಪ ಸಂಪಾದಕರಾಗಿ, ಸುದ್ದಿ ಸಂಪಾದಕರಾಗಿ ಅನೇಕ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಸೊಲ್ಲಾಪುರದ ಸಾಮಾಜಿಕ ಪ್ರಗತಿಯಲ್ಲಿ ತುಂಬ ಮಹತ್ವದ ಪಾತ್ರ ವಹಿಸಿದ್ದಾರೆ.

ಅನೇಕ ವೀರಶೈವ ಯುವಕರು, ಹಿರಿಯರು ಸಾಮಾಜಿಕ-ರಾಜಕೀಯ-ಧಾರ್ಮಿಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಸೊಲ್ಲಾಪುರದಲ್ಲಿ ವಿಶೇಷವಾಗಿದೆ. ಒಬ್ಬನೇ ವ್ಯಕ್ತಿ ತನ್ನ ವ್ಯವಸಾಯ ಮಾಡುತ್ತ, ಧಾರ್ಮಿಕ ಕೆಲಸಗಳಲ್ಲಿಯೂ, ವಧು-ವರ ಮೇಳದಂಥ ಸಾಮಾಜಿಕ ಕೆಲಸಗಳಲ್ಲಿಯೂ ಭಾಗಿಯಾಗುವುದು ಎಂದರೆ ಸಮಾಜದ ಪ್ರಗತಿಯ ಲಕ್ಷಣ ಎನ್ನಬಹುದು. ಅಂಥವರು ಸೊಲ್ಲಾಪುರದಲ್ಲಿ ನೂರಾರು ಸಂಖ್ಯೆಯಲ್ಲಿದ್ದಾರೆ.

ಸಾಹಿತ್ಯ ಮತ್ತು ಕಲೆಯ ದೃಷ್ಟಿಯಿಂದ ಸೊಲ್ಲಾಪುರ ವೀರಶೈವರು ಮಹತ್ವದ ಕಾಣಿಕೆಯನ್ನು ನೀಡಿದ್ದಾರೆ. ಸಿದ್ಧೇಶ್ವರ ದೇವಸ್ಥಾನ ಸಂಕೀರ್ಣ ದೇಶದಲ್ಲಿಯೇ ಪ್ರಸಿದ್ಧವಾದ ಕ್ಷೇತ್ರವೆನಿಸಿದೆ. ಸಿದ್ಧರಾಮನ ವಚನ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಕೊಡುಗೆ ಎನಿಸಿದೆ. ಮುಂದೆ ಬಂದ ಕವಿಗಳು ಸಾಹಿತ್ಯದ ವಿವಿಧ

ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗಳನ್ನು ಮಾಡಿದ್ದಾರೆ. ಸಾಹಿತ್ಯದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪಂ. ಪ್ರಭುದೇವ ಸರದಾರರಂಥ ಶಾಸ್ತ್ರೀಯ ಸಂಗೀತಗಾರರು ವಿಶ್ವಮಟ್ಟದಲ್ಲಿ ಹೆಸರು ಪಡೆದವರು. ಭರಮಣ್ಣ ಕೋಟ್ಯಾಳಕರ್ ಚಿತ್ರಕಲೆಯಲ್ಲಿ ದೇಶದಲ್ಲಿಯೇ ಹೆಸರು ಪಡೆದವರು. ಅವರಿಗೆ ಪ್ರಚಾರ ದೊರೆತಿದ್ದರೆ ವಿಶ್ವಮಟ್ಟದಲ್ಲಿ, ರವಿವರ್ಮರಂತೆ ಹೆಸರು ಪಡೆಯಬಹುದಾಗಿತ್ತು. ಔಂಧದ ಮಹಾರಾಜರು ಅವರಿಗೆ "ಚಂದ್ರವರ್ಮ" ಎಂಬ ಬಿರುದನ್ನು ನೀಡಿದ್ದರು.!

ಮಲ್ಲಿಕಾರ್ಜುನ ಮಂದಿರ, ಇಂದ್ರಭುವನ, ನರಸಿಂಗ್ ಗಿರ್‌ಜಿ ಮಿಲ್, ಮಡಕಿ ಮನೆ, ಈಚಿನ ಹೊಟಗಿಮಠ ಸಂಸ್ಥೆ–ವೀರಶೈವ ವಾಸ್ತು ಕಲಾ ದೃಷ್ಟಿಯಿಂದ ಗಮನಾರ್ಹವಾಗಿದೆ.

ಒಂದು ಸಣ್ಣ ನಗಣ್ಯ ಹಳ್ಳಿಯಾಗಿದ್ದ ಸೊಲ್ಲಾಪುರಕ್ಕೆ ಧಾರ್ಮಿಕ ಕ್ಷೇತ್ರವಾಗಿ ಮೆರೆಸಿದವರು ಶ್ರೀ ಶಿವಯೋಗಿ ಸಿದ್ಧರಾಮ. ಕೆರೆ, ಮಠ, ಮಂದಿರ, ಅನ್ನಛತ್ರ, ಅರವಟ್ಟಿಗೆ ಅಷ್ಟವಿನಾಯಕ, ಅರವತ್ತೆಂಟು ಲಿಂಗ ಸ್ಥಾಪನೆಗಳಿಂದ ಈ ಊರಿಗೆ "ದಕ್ಷಿಣ ಕಾಶಿ" ಮಾಡಿದ. ಇದು ಸಾಮಾನ್ಯ ಸಾಧನೆ ಅಲ್ಲ. ಒಬ್ಬ ವೀರಶೈವ ಮಾಡಿದ ಅದ್ಭುತ, ಕಲ್ಪನಾತೀತ ಸಮಾಜೋ–ಧಾರ್ಮಿಕ ಪ್ರಗತಿಯ ಕೆಲಸ. ಅದೊಂದು ಧಾರ್ಮಿಕ ಸುವರ್ಣಯುಗ".

1850 ರಿಂದ 1950 ರ ವರೆಗೆ ಸೊಲ್ಲಾಪುರದಲ್ಲಿ "ವೀರಶೈವರ ಸುವರ್ಣಯುಗ" ಇತ್ತು. ಈ ನೂರು ವರ್ಷಗಳಲ್ಲಿ ವ್ಯಾಪಾರ, ಉದ್ಯೋಗ, ಒಕ್ಕಲುತನ, ಇಂಡಸ್ಟ್ರೀ ಈ ಎಲ್ಲ ಕ್ಷೇತ್ರಗಳಲ್ಲಿ ವೀರಶೈವರು ದೇಶದಲ್ಲಿ ಹೆಸರು ವಾಸಿಯಾಗಿದ್ದರು. ಇವರು ಯಾವುದೇ ಕ್ಷೇತ್ರದಲ್ಲಿ ಇಳಿದರೂ ಅದರಲ್ಲಿ ಯಶಸ್ವಿಯಾಗುತ್ತಿದ್ದರು. ಇವರು ಮುಟ್ಟಿದ್ದೆಲ್ಲ ಚಿನ್ನವಾಗುತ್ತಿತ್ತು* ಎಂದು ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅದೊಂದು "ಆರ್ಥಿಕ ಸುವರ್ಣ ಯುಗ".

ಒಂದು ಭವ್ಯವಾದ ಪರಂಪರೆ, ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಸುಸಮೃದ್ಧವಾದ ಸಮಾಜದ ಚಿತ್ರ ಕಣ್ಣಮುಂದೆ ವಿಜೃಂಭಣೆಯಿಂದ ಮೆರವಣಿಗೆ ಹೊರಿಬಂತೆ ಕಾಣುವ ಆ ಚಿತ್ರ ಈಗ ಇತಿಹಾಸದ ಪುಟಗಳನ್ನು ಸೇರಿದೆ.

ಇಂದಿನ ವೀರಶೈವರ ಹಿಂದೆ ಆ ಭವ್ಯ ಪರಂಪರೆ ಇದೆ. ಗಟ್ಟಿಯಾದ ಇತಿಹಾಸ ಇದೆ. ವಾಸ್ತವ ಸಂಗತಿಗಳ ಚಿತ್ರಣ ಇದೆ. ಅದನ್ನು ಗಮನಿಸಿ ಮುಂದಿನ ಹೆಜ್ಜೆಗಳನ್ನು ಇಡಬೇಕು.

- ಶ್ರೀ ಕೆ.ಬಿ. ಪೂರ್ವಾಚಾರಿ ವಯಸ್ಸು 85
- ಡಾ. ವಸಂತ ದೀವಾಣಜಿ ವಯಸ್ಸು 71
- ಶ್ರೀ ಶಿವಶಂಕರ ಬಟಗೇರಿ ವಯಸ್ಸು 86.